ಅ) ಈ ವಿತರಣ ಅಕ್ಕಿಯ ಪ್ರಮಾಣದಲ್ಲಿ ಸರ್ಕಾರದವರು ಸಬ್ಸಿಡಿ ರೂಪದಲ್ಲಿ ನೀಡಿರುವ ಅಕ್ಕಿಯ ಪ್ರಮಾಣವೆಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್(ವಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).— [illegible]

ಅ) ೨-೦೦ ರೂ. ಗೆ ಕೆ.ಜಿ. ಅಕ್ಕಿ ಯೋಜನೆಯು ದಿನಾಂಕ ೧-೧೧-೮೫ರಿಂದ ಆರಂಭವಾದ್ದರಿಂದ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

1962ರಲ್ಲಿ ಕರ್ನಾಟಕ-ಮಹಾರಾಷ್ಟ್ರ ಗಡಿ ಭಾಗಗಳಲ್ಲಿ ಭಾಷೆಯ ಬಗ್ಗೆ ಮುಖ್ಯಮಂತ್ರಿಗಳು ಪರಸ್ಪರ ಒಪ್ಪಂದ.

೧೫೬೭. ಶ್ರೀ ಎ. ಬಿ. ದೇಸಾಯಿ (ಧಾರವಾಡ ಗ್ರಾಮೀಣ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೬೨ರಲ್ಲಿ ಕರ್ನಾಟಕ-ಮಹಾರಾಷ್ಟ್ರ ಅಂದಿನ ಮುಖ್ಯಮಂತ್ರಿಗಳು ಪರಸ್ಪರ ಒಪ್ಪಿ ಕೊಂಡಂತೆ ಗಡಿ ಭಾಗಗಳಲ್ಲಿ ಯಾವ ಭಾಷೆಯಲ್ಲಿ ಅಲ್ಲಿಯ ಸ್ಥಳೀಕರು ಆಡುತ್ತಾರೋ ರಾಜ್ಯ ಭಾಷೆಯೊಂದಿಗೆ ಆ ಭಾಷೆಯಲ್ಲಿ ಸರ್ಕಾರವು ಆಜ್ಞೆಗಳನ್ನು ಹೊರಡಿಸಬೇಕೆಂಬುದು ಒಪ್ಪಂದವಾಗಿದೆಯೇ ?

ಆ) ಹಾಗಿದ್ದಲ್ಲಿ ಕರ್ನಾಟಕದ ಗಡಿ ಪ್ರದೇಶಗಳಲ್ಲಿ ಕನ್ನಡ ಭಾಷೆಯೊಂದಿಗೆ ಮರಾಠಿಯಲ್ಲಿಯೂ ಸರ್ಕಾರಿ ಆಜ್ಞೆಗಳನ್ನು ಹೊರಡಿಸುತ್ತಿದ್ದು, ಮಹಾರಾಷ್ಟ್ರದ ಗಡಿ ಪ್ರದೇಶಗಳಲ್ಲಿ ಮರಾಠಿ ಜೊತೆ ಕನ್ನಡ ಭಾಷೆಯಲ್ಲಿ ಸರ್ಕಾರಿ ಆಜ್ಞೆಗಳು ಹೊರಡಿಸುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ(ಮುಖ್ಯಮಂತ್ರಿಗಳು).—

ಅ) ೧೯೬೨ರಲ್ಲಿ ಇಂತಹ ಯಾವುದೇ ಒಪ್ಪಂದವಾಗಿಲ್ಲ.

ಆ) ಕರ್ನಾಟಕ ಸರಕಾರವು ಗಡಿ ಪ್ರದೇಶಗಳಲ್ಲಿ ಮರಾಠಿಯಲ್ಲಿ ಸರಕಾರಿ ಆಜ್ಞೆ ಹೊರಡಿಸುತ್ತಿಲ್ಲ, ಮಹಾರಾಷ್ಟ್ರ ಸರಕಾರವೂ ಈ ಬಗ್ಗೆ ಕ್ರಮ ತೆಗೆದುಕೊಂಡಿಲ್ಲವೆಂದು ತಿಳಿದು ಬರುತ್ತದೆ.

ಇ) ಮಹಾರಾಷ್ಟ್ರ ಮತ್ತು ಕರ್ನಾಟಕ ಸರಕಾರಗಳು ಉಭಯ ರಾಜ್ಯಗಳ ಹಿರಿಯ ಅಧಿಕಾರಿಗಳ ಜಂಟಿ ಸಮಿತಿಯನ್ನು ರಚಿಸಿದ್ದು ಈ ಜಂಟಿ ಸಮಿತಿಯು ನೀಡಿದ ಒಮ್ಮತದ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಬೇಕೆಂದು ಉಭಯ ರಾಜ್ಯಗಳು ಒಪ್ಪಿಕೊಂಡಿವೆ.

ನಂಜನಗೂಡು ತಾಲ್ಲೂಕಿಗೆ ಗ್ರಾಮಾಂತರ ಬಸ್ ಸೌಲಭ್ಯ.

೧೫೬೮. ಶ್ರೀ ಡಿ. ಟಿ. ಜಯಕುಮಾರ್(ನಂಜನಗೂಡು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ನಂಜನಗೂಡು ತಾಲ್ಲೂಕಿಗೆ ಗ್ರಾಮಾಂತರ ಬಸ್ ಸೌಕರ್ಯವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದೇ ?

೨) ಈ ರೀತಿಯ ಸೌಕರ್ಯಕ್ಕೆ ಎಷ್ಟು ಬಸ್ಸುಗಳನ್ನು ಕೊಡಲಂ ಆಲೋಚಿಸಲಾಗಿದೆ.

೩) ಈ ಸೌಕರ್ಯವನ್ನು ಎಂದಿನಿಂದ ಪ್ರಾರಂಭ ಮಾಡಲು ಕ್ರಮ ಕೈಗೊಳ್ಳಲಾಗುವುದು ?